# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕವಿಪ್ರನಿನಿ/ಬಿ54/41167/13-14

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ದಿನಾಂಕ :- 25/10/13

ಎಲ್ಲಾ ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ), ಎಸ್ಕಾಂಗಳು
ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
ಎಲ್ಲಾ ಅಧೀಕ್ಷಕ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.

ಮಾನ್ಯರೇ,

**ವಿಷಯ:** ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತುಕ್ರಮ ತೆಗೆದು ಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳ ಬಗ್ಗೆ ಮಾಹಿತಿ.

**ಉಲ್ಲೇಖ:** ಈ ಕಚೇರಿಯ ಪತ್ರ ಸಂಖ್ಯೆ: ಕವಿಪ್ರನಿನಿ/B21/5048/2006-07 ದಿನಾಂಕ: 20.07.2007.

******

ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿ/ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿರುವುದು ಸರಿಯಷ್ಟೆ. ಆದರೆ ಇತ್ತೀಚಿನ ದಿನಗಳಲ್ಲಿ ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ವಿವಿಧ ಕಛೇರಿಗಳ ಅಧಿಕಾರಿ/ನೌಕರರ ವಿರುದ್ಧ ಸಲ್ಲಿಸಲಾದ ಶಿಸ್ತುಕ್ರಮದ ಪ್ರಸ್ತಾವನೆಗಳಲ್ಲಿ ಪ್ರಾಥಮಿಕ ತನಿಖಾ ವರದಿಗಳು ಗುಣಮಟ್ಟದಲ್ಲಿರದೇ ಬಹಳಷ್ಟು ನ್ಯೂನತೆಗಳನ್ನು ಹೊಂದಿರುವುದು ಕಂಡುಬಂದಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಮಾಹಿತಿಗಳನ್ನು ಅಪೂರ್ಣವಾಗಿ ರವಾನಿಸಲಾಗುತ್ತಿದ್ದು, ಇದರಿಂದ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಅನಿವಾರ್ಯವಾಗಿ ವಿಳಂಬಕ್ಕೆ ಅವಕಾಶ ನೀಡಿದಂತಾಗುತ್ತಿದೆ. ಇವುಗಳನ್ನು ತಡೆಗಟ್ಟುವ ಸಲುವಾಗಿ ದಿನಾಂಕ 20.7.2007 ರ (ಉಲ್ಲೇಖಿತ) ಪತ್ರದಲ್ಲಿ ಕೆಲವೊಂದು ಸಲಹೆಗಳನ್ನು ಪಾಲನೆಗಾಗಿ ನೀಡಲಾಗಿದ್ದರೂ ಸಹ ಸದರಿ ಸಲಹೆ/ ಸೂಚನೆಗಳನ್ನು ಪಾಲಿಸದೆ ಶಿಸ್ತುಕ್ರಮದ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಇದರಿಂದ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ನಿಖರವಾದ ಆರೋಪಣಾ ಪಟ್ಟಿ ಸಿದ್ದಪಡಿಸಲು ತೊಂದರೆ ಉಂಟಾಗಿ ಆರೋಪಿಗಳು ಶಿಸ್ತು ಕ್ರಮದಿಂದ ನುಣುಚಿಕೊಳ್ಳುವ ಸಾಧ್ಯತೆ ಇದ್ದು, ಕಂಪನಿಗೆ ಆರ್ಥಿಕ ನಷ್ಟ ಒಳಗೊಂಡಂತೆ ದೀರ್ಘ ದುಷ್ಪರಿಣಾಮ ಉಂಟಾಗುವ ಸಂಭವವಿರುತ್ತದೆ.

ಕವಿಪ್ರನಿನಿ/ಎಲ್ಲಾ ಎಸ್ಕಾಂಗಳ ಸಂಬಂಧಪಟ್ಟ ಕಚೇರಿಯ ಮುಖ್ಯಸ್ಥರುಗಳು ಜಾಗೃತದಳ, ತಾಂತ್ರಿಕ ತನಿಖೆ ಮತ್ತು ಗುಣನಿಯಂತ್ರಣ ಹಾಗೂ ಆಂತರಿಕ ತನಿಖೆಯವರು ತನಿಖೆಯನ್ನು ನಡೆಸಿ ನೀಡಿರುವ ತನಿಖಾ ವರದಿಗಳನ್ನು ಪ್ರಾಥಮಿಕ ಹಂತದಲ್ಲಿಯೇ ಪರಿಶೀಲಿಸಿ, ಸದರಿ ವರದಿಗಳು ನ್ಯೂನತೆಗಳಿಂದ ಕೂಡಿದ್ದಲ್ಲಿ ಅಥವಾ ಅಸ್ಪಷ್ಟವಾಗಿದ್ದಲ್ಲಿ, ಅವುಗಳನ್ನು ಸರಿಪಡಿಸಿ, ತನಿಖಾ ವರದಿಯಲ್ಲಿ ಹೆಸರಿಸಲಾದ ಅಧಿಕಾರಿ/ನೌಕರರ ಪ್ರಕರಣದಲ್ಲಿನ ಭಾಗಿತ್ವವನ್ನು ಖಚಿತಪಡಿಸಿಕೊಂಡು ಅಂತಹ ಅಧಿಕಾರಿ/ನೌಕರರ ವಿರುದ್ದ ತಮ್ಮ ಹಂತದಲ್ಲಿಯೇ ಕಾರಣ ಕೇಳುವ ನೋಟಿಸ್‌ನ್ನು ಜಾರಿಗೊಳಿಸಿ ನಂತರ ಅವರಿಂದ ವಿವರಣೆಯನ್ನು ಪಡೆದು ಪರಿಶೀಲಿಸಿ ಶಿಸ್ತು ಕ್ರಮದ ಅಗತ್ಯತೆ ಕಂಡು ಬಂದಲ್ಲಿ ಮಾತ್ರ ಕರ್ತವ್ಯಲೋಪವೆಸಗಿರುವರೆನ್ನಲಾದ ಅಧಿಕಾರಿ/ನೌಕರರ ಪಟ್ಟಿಯೊಂದಿಗೆ ಶಿಸ್ತುಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಈ ಕಚೇರಿಗೆ ಸಲ್ಲಿಸುವುದು. ಜಂಟಿ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗುವ ಪ್ರಸ್ತಾವನೆಗಳಲ್ಲಿ ತಪ್ಪಿತಸ್ಥ ಅಧಿಕಾರಿ/ನೌಕರರ ನಡುವೆಯ

ಆರೋಪಗಳಿಗೆ ಸಂಬಂಧವಿದೆಯೇ (Joint attribution) ಎಂಬುದನ್ನು ಗಮನಿಸುವುದು. ಅಪೂರ್ಣ ಮಾಹಿತಿ/ದಾಖಲೆಗಳೊಂದಿಗೆ ಹಾಗೂ ದೋಷಪೂರಿತ ತನಿಖಾ ವರದಿಗಳನ್ನಾಧರಿಸಿ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಕವಿಪ್ರನಿನಿಯ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಈ ಕಚೇರಿಯಿಂದ ಹಿಂಪಡೆಯಲು ಹಾಗೂ ಭಾಗಿದಾರರೆನ್ನಲಾದ ಅಧಿಕಾರಿ/ನೌಕರರನ್ನು ಇಲಾಖಾ ವಿಚಾರಣೆಗೂ ಮುನ್ನ ಪ್ರಕರಣದಿಂದ ಕೈಬಿಡಲು ಅವಕಾಶವಿರುವುದಿಲ್ಲ .

ಪ್ರತಿಯೊಬ್ಬ ಆರೋಪಿ ಅಧಿಕಾರಿ/ನೌಕರರು ನಿವೃತ್ತಿಯಾಗುವ ದಿನಾಂಕ, ಘಟನೆ ನಡೆದ ಅವಧಿ, ಉಲ್ಲಂಘಿಸಲಾದ ನಿಯಮಗಳು, ಆರೋಪಿತ ಅಧಿಕಾರಿ/ನೌಕರರ ಹುದ್ದೆಯ ವಿವರಗಳು, ಪ್ರತಿಯೊಬ್ಬ ಆರೋಪಿತ ಅಧಿಕಾರಿ/ನೌಕರರ ವಿರುದ್ಧದ ಪ್ರತ್ಯೇಕವಾದ ಹಾಗೂ ನಿರ್ಧಿಷ್ಟವಾದ ಆರೋಪಗಳು, ಆರೋಪಗಳನ್ನು ಸಮರ್ಥಿಸುವ ಮೂಲ/ದೃಢೀಕೃತ ದಾಖಲೆಗಳು, ಆರ್ಥಿಕ ನಷ್ಟವಾಗಿದ್ದಲ್ಲಿ ಪ್ರತಿಯೊಬ್ಬ ಆರೋಪಿ ಅಧಿಕಾರಿ/ನೌಕರರಿಂದ ಕಂಪನಿಗೆ ಉಂಟಾಗಿರುವ ಖಚಿತ ಆರ್ಥಿಕ ನಷ್ಟದ ಪ್ರತ್ಯೇಕವಾದ ವಿವರಗಳು, ಸಾಕ್ಷಿದಾರರ ಹೆಸರು ಮತ್ತು ಹುದ್ದೆ, ಆರೋಪಿತ ಅಧಿಕಾರಿ/ನೌಕರರ ಮಾದರಿ ರುಜು ಹಾಗೂ ಸೇವಾ ವಿವರಗಳು ಹಾಗೂ ಕರಡು ಆರೋಪಣಾ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದಿನಾಂಕ 20.7.2007 ರ ಪತ್ರದಲ್ಲಿ ತಿಳಿಸಿರುವ ಅಂಶಗಳೊಂದಿಗೆ ಮೇಲ್ಕಂಡ ಮಾಹಿತಿ/ವಿವರಗಳೊಂದಿಗೆ ಹಾಗೂ ಪೂರ್ಣ ದಾಖಲೆಗಳನ್ನು ಕವಿಪ್ರನಿನಿ, ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು.

ಈ ಮೇಲೆ ತಿಳಿಸಿರುವ ವಿವರಗಳು ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಪ್ರಸ್ತಾವನೆಗೆ ಮಾದರಿಯೇ ವಿನಃ ಇನ್ನು ಹೆಚ್ಚಿನ ಮಾಹಿತಿ/ದಾಖಲೆಗಳ ಅಗತ್ಯವಿದ್ದಲ್ಲಿ ಅವುಗಳನ್ನು ಸಹ ಸಲ್ಲಿಸಬೇಕಾಗುತ್ತದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
(ಆಡಳಿತ ಮತ್ತು ಮಾ.ಸಂ)

ಪ್ರತಿ:-

ಅಧೀಕ್ಷಕ ಇಂಜಿನಿಯರ್(ವಿ) (ಐಟಿ ಮತ್ತು ಎಂಐಎಸ್), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರುರವರ ಮಾಹಿತಿಗಾಗಿ ಹಾಗೂ ಇದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.